ಪಿಡಬ್ಲುಃ1

ಸಾಕ್ಷಿಯನ್ನು ದಿಃ 21-04-2022 ರಂದು ಕರೆಸಲಾಯಿತು. ಪ್ರಮಾಣ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿಯರ ಪರ ಶ್ರೀ ಬಿ ಎ ಸಿ ವಕೀಲರಿಂದಃ

ನಾನು ಈ ದಾವೆಯಲ್ಲಿ 1 ನೇ ವಾದಿಯಾಗಿದ್ದು ನನ್ನ ಮುಖ್ಯವಿಚಾರಣೆ ಬಾಬ್ತು, ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು ಅದರಲ್ಲಿ ಬರೆದಿರುವ ಒಕ್ಕಣೆಗಳನ್ನು ನಾನೇ ಹೇಳಿ ಬರೆಸಿದ್ದು ಅದರ ಸಂಗತಿಗಳು ನನಗೆ ತಿಳಿದಿರುತ್ತದೆ. ಪ್ರಮಾಣ ಪತ್ರದ ಸಂಗತಿಗಳನ್ನು ಓದಿ ತಿಳಿದುಕೊಂಡು ಅದು ಸತ್ಯವಾಗಿರುತ್ತದೆ ಎಂದು ದೃಢಿಕರಿಸಿದ್ದೇನೆ ಮತ್ತು ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನದಾಗಿರುತ್ತದೆ

ನನ್ನ ಮುಖ್ಯ ವಿಚಾರಣೆಗೆ ಪೂರಕವಾಗಿ ಈ ಕೆಳಗಿನ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ನೋಡಿ ಗುರುತಿಸಿದ್ದೇನೆ.

1.ಪುರಸಭೆಯವರು ನೀಡಿರುವ ಹಿಂಬರಹ ನಿಪಿ-1

2.ಇಂಡೆಕ್ಸ್ ನಮೂನೆ ನಿಪಿ-2

3. ಪುರಸಭೆ ಮುಖ್ಯಾಧಿಕಾರಿಗಳಿಗೆ ನೀಡಿರುವ ದೂರು ನಿಪಿ-3

4. ಮಾನ್ಯ ಉಪವಿಭಾಗಾಧಿಕಾರಿಗಳು, ಸಕಲೇಶಪುರ ಇವರಿಗೆ ನೀಡಿರುವ ಅರ್ಜಿಯ ಹಿಂಬರಹ ನಿಪಿ-4

5.ದಿಃ 27-01-2007 ರ ಕ್ರಯಪತ್ರದ ದೃಢೀಕೃತ ನಕಲು ನಿಪಿ5

6. ಐದು ಪಹಣಿಗಳ ದೃಢೀಕೃತ ನಕಲು ನಿಪಿ-6 ರಿಂದ 10

7. ನನ್ನ ತಂದೆಯ ಮರಣ ಪ್ರಮಾಣಪತ್ರ ನಿಪಿ11

8. ಹಕ್ಕುಬದಲಾವಣೆ ವಹಿಯ ದೃಢೀಕೃತ ನಕಲು ನಿಪಿ-12 ಎಂದು ಗುರುತಿಸಿದ್ದೇನೆ.

ಆದ್ದರಿಂದ ನಾನು ವಾದಪತ್ರದಲ್ಲಿ ಕೋರಿದಂತೆ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್ ಎನ್ ಎಲ್ ವಕೀಲರಿಂದಃ

ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಉಕ್ತಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಣ ಯಂತ್ರದ ಮೂಲಕ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಒ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು.